

# ಸೋನಾಕ್ಷಿ ಡಿಶುಂ ಡಿಶುಂ

ನಟಿ ಸೋನಾಕ್ಷಿ ಸಿನ್ಹಾ ಹೊಡೆದಾಟಕ್ಕೆ ಸಿದ್ಧರಾಗುತ್ತಿದ್ದಾರೆ. ತಾವು ರೊಮ್ಯಾನ್ಸ್‌ಗೆ ಮಾತ್ರವಲ್ಲ ಆ್ಯಕ್ಷನ್‌ಗೂ ಸೈ ಎಂದು ಸಾಬೀತು ಪಡಿಸಲು ಹೊರಟಿದ್ದಾರೆ. ಅದಕ್ಕಾಗಿ ಒಂದು ತಿಂಗಳು ಪರಿಣತ ಫೈಟರ್‌ಗಳಿಂದ ಮಾರ್ಷಿಯಲ್ ಆರ್ಟ್ಸ್ ತರಬೇತಿ ಪಡೆಯಲಿದ್ದಾರೆ. ಸೋನಾಕ್ಷಿಗೆ ಹೊಡೆದಾಟದ ಪಟ್ಟುಗಳನ್ನು ಹೇಳಿಕೊಡಲೆಂದೇ ಥಾಯ್ಲೆಂಡಿನಿಂದ ಮಾರ್ಷಿಯಲ್ ಆರ್ಟ್ಸ್ ಪರಿಣತರು ಮುಂಬೈಗೆ ಬರುತ್ತಿದ್ದಾರೆ.

ಅಂದ ಹಾಗೆ, ಸೋನಾಕ್ಷಿ ಇಷ್ಟೆಲ್ಲಾ ತಯಾರಿ ನಡೆಸುತ್ತಿರುವುದು ಖ್ಯಾತ ನಿರ್ದೇಶಕ ಮುರುಗದಾಸ್ ನಿರ್ದೇಶನದ ಚಿತ್ರಕ್ಕೆ. ಈಗಷ್ಟೇ 'ಹಾಲಿಡೇ' ಚಿತ್ರದ ಗೆಲುವಿನಿಂದ ಬೀಗುತ್ತಿರುವ ಮುರುಗದಾಸ್ ಅವರ ಚಿತ್ರದಲ್ಲಿ ನಟಿಸಲು ಬಾಲಿವುಡ್‌ನ ಮುಂಚೂಣಿ ನಾಯಕಿಯರೆಲ್ಲಾ ತುದಿಗಾಲಲ್ಲಿ ನಿಂತಿದ್ದಾರೆ. ಆ ಅದೃಷ್ಟ ಮತ್ತೊಮ್ಮೆ ಸೋನಾಕ್ಷಿ ಪಾಲಾಗಿದೆ. ಇನ್ನೂ ಹೆಸರಿಡದ ಈ ಚಿತ್ರದಲ್ಲಿ ಸೋನಾಕ್ಷಿ ಕಾಲೇಜು ವಿದ್ಯಾರ್ಥಿನಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದು ನಾಯಕಿ ಪ್ರಧಾನ ಚಿತ್ರ. ಸೋನಾಕ್ಷಿ ಯಾವ ಹೀರೊಗಳಿಗೂ ಕಮ್ಮಿ ಇಲ್ಲ ಎನ್ನುವಂತೆ ಆ್ಯಕ್ಷನ್ ಮಾಡಲಿದ್ದಾರಂತೆ. ಹೀಗಾಗಿ ಸೋನಾಕ್ಷಿ ಈ ಚಿತ್ರದ ಹೀರೊ ಎಂದು ಹೇಳಿದ್ದಾರೆ ಮುರುಗದಾಸ್.

ಈ ಸಾಹಸದ ಬಗ್ಗೆ ಪ್ರಭುದೇವ, ಅಕ್ಷಯ್ ಕುಮಾರ್ ಮತ್ತು ಶಾಹಿದ್ ಕಪೂರ್‌ರಂಥ ಆತ್ಮೀಯರಿಂದಲೂ ಸೋನಾಕ್ಷಿ ಮಾಹಿತಿ ಪಡೆದುಕೊಂಡಿದ್ದಾರಂತೆ. ಹೇಳಿ ಕೇಳಿ ಸೋನಾಕ್ಷಿಯದು ಗುಂಡು ದೇಹ. ಆ್ಯಕ್ಷನ್ ಮಾಡಲು ಆಕೆಯಿಂದ ಸಾಧ್ಯವೇ? ಎಂಬ ವ್ಯಂಗ್ಯದ ಮಾತುಗಳಿಗೆ ಉತ್ತರ ನೀಡಲು ಸೋನಾಕ್ಷಿ ತಯಾರಿ ನಡೆಸಿದ್ದಾರೆ. ಚಿತ್ರರಂಗಕ್ಕೆ ಕಾಲಿಡಲು ಸಲ್ಮಾನ್ ಖಾನ್ ಸಲಹೆಯಂತೆ 15–20 ಕೆ.ಜಿ. ತೂಕ ಕಳೆದುಕೊಂಡಿದ್ದ ತನಗೆ ಇದೊಂದು ಸವಾಲೇ.. ಎಂಬ ಪ್ರಶ್ನೆ ಸೋನಾಕ್ಷಿಯದ್ದು. ಫಿಟ್ ದೇಹ ಹೊಂದಲು ಸೋನಾಕ್ಷಿ ವರ್ಕ್‌ಔಟ್‌ಗೆ ಮೀಸಲಿಟ್ಟ ಸಮಯವನ್ನು ಹೆಚ್ಚಿಸಿದ್ದಾರಂತೆ.

## ಸಯಾಮಿ ಬಿಪಾಶಾ



'ಧೂಮ್ 2' ಚಿತ್ರದ ಬಳಿಕ ಬಿಪಾಶಾ ಬಸು ಮತ್ತೆ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಒಂದು ಬದಲಾವಣೆ. ಅವರಿಲ್ಲಿ ಅವರದೇ ದೇಹಕ್ಕೆ ಬೆಸೆದುಕೊಳ್ಳಲಿದ್ದಾರೆ. ಅಂದರೆ, ಬಿಪಾಶಾ ಕಾಣಿಸಿಕೊಳ್ಳುತ್ತಿರುವುದು ಸಯಾಮಿ ಅವಳಿಯ ಪಾತ್ರಗಳಲ್ಲಿ. ಒಂದರಲ್ಲಿ ಬಿಪಾಶಾ ಪ್ರೇಮಿಸಿದರೆ, ಇನ್ನೊಂದು ಪಾತ್ರದಲ್ಲಿ ಹೆದರಿಸಲಿದ್ದಾರೆ. ಥಾಯ್ ಭಾಷೆಯ ಹಾರರ್ ಚಿತ್ರದ ಹಿಂದಿ ಅವತರಣಿಕೆ ಈ ಚಿತ್ರ.

ಥಾಯ್‌ನ ರೀಮೇಕ್ ಎಂದಾಗ ಕನ್ನಡದ 'ಚಾರುಲತಾ' ನೆನಪಾಗುತ್ತದೆ ಅಲ್ಲವೇ? ಹೌದು, ಇದು ಅದೇ ಚಿತ್ರ. ಪ್ರಿಯಾಮಣಿ ಸಯಾಮಿ ಅವಳಿಯಾಗಿ ನಟಿಸಿದ್ದ ಪಾತ್ರವನ್ನೇ ಬಿಪಾಶಾ ಪೋಷಿಸುತ್ತಿದ್ದಾರೆ. ಒಂದೇ ರೀತಿಯಲ್ಲಿ ಕಾಣಿಸುವ ಆದರೆ, ಎರಡು ವಿಭಿನ್ನ ವ್ಯಕ್ತಿತ್ವದ ಪಾತ್ರಗಳನ್ನು ನಿಭಾಯಿಸುವುದು ಸವಾಲಿನ ಕೆಲಸ ಎನ್ನುವುದು ಬಿಪಾಶಾ ಅಭಿಪ್ರಾಯ. ಸಯಾಮಿ ಪಾತ್ರಗಳು ಚಿತ್ರರಂಗಕ್ಕೆ ಹೊಸತಲ್ಲ. ಪ್ರಿಯಾಮಣಿ ಚತುರ್ಭಾಷಾ ಚಿತ್ರದಲ್ಲಿ ಸಯಾಮಿಯಾಗಿ ಕಾಣಿಸಿಕೊಂಡಿದ್ದರು. ತಮಿಳಿನ ನಟ ಸೂರ್ಯ 'ಮಾತ್ರಾನ್' ಚಿತ್ರದಲ್ಲಿ ಸಯಾಮಿ ಪಾತ್ರ ಪೋಷಿಸಿದ್ದರು. ನಿರ್ದೇಶಕ ವಿಕಾಸ್ ಬಾಹ್ಲ್, ಸಲ್ಮಾನ್ ಖಾನ್‌ರನ್ನು ಸಯಾಮಿಯಾಗಿ ತೋರಿಸುವ ಪ್ರಯತ್ನ ನಡೆಸಿದ್ದರು. ಆದರೆ ಚಿತ್ರ ಸೆಟ್ಟೇರಿರಲಿಲ್ಲ. ಸಯಾಮಿ ಪಾತ್ರ ನಿರ್ವಹಣೆ ಸುಲಭವಲ್ಲ, ನಿಜ. ಆದರೆ ಈಗಾಗಲೇ ದಕ್ಷಿಣ ಭಾರತದ ನಾಲ್ಕು ಭಾಷೆಗಳಲ್ಲಿ ಬಿಡುಗಡೆಯಾಗಿ ಸೋತಿರುವ ಚಿತ್ರವನ್ನೇ ಮತ್ತೆ ಸೃಷ್ಟಿಸುವ ಸಾಹಸದ ಅಗತ್ಯವೇನು ಎಂಬ ಪ್ರಶ್ನೆ ಬಿ–ಟೌನಿನಲ್ಲಿ ಕೇಳಿಬರುತ್ತಿದೆ.

■ ಅಮಿ